<u>ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಹಾವೇರಿ.</u>
<u>ಸಿಸಿ ನಂಬರ್ **125/2019**</u>

<u>ಫಿರ್ಯಾದಿ</u> ಸರಕಾರ (ಹಾವೇರಿ ಮಹಿಳಾ ಪೊಲೀಸ ಠಾಣೆ).

ವಿರುದ್ಧ

<u>ಆರೋಪಿತರುಃ</u> **1.** ಈರಣ್ಣಾ ತಂದೆ ನಿಂಗಪ್ಪ ಬೆಳ್ಳಿವಾಲಿ
ವಯಾಃ **34** ವರ್ಷ **,** ಉದ್ಯೋಗಃ ಸರ್ಕಾರಿ ನೌಕರ
ಸಾಃ ಗುಂಡೇನಹಳ್ಳಿ ತಾಃ ಖಾನಾಪುರ ಜಿಃ ಬೆಳಗಾವಿ

**2.** ನಾಗಮ್ಮ ಉರ್ಪ ಪ್ರೇಮಾ ಕೋಂ ನಾಗಪ್ಪ ಬೆಳ್ಳಿವಾಲಿ
ವಯಾಃ **50** ವರ್ಷ**,** ಉದ್ಯೋಗಃ ಗೃಹಿಣಿ
ಸಾಃ ಗುಂಡೇನಹಳ್ಳಿ ತಾಃ ಖಾನಪುರ ಜಿಃ ಬೆಳಗಾವಿ

**:<u>ದೋಷಾರೋಪಣೆ:</u>**

ಇದರಲ್ಲಿ ಶ್ರೀ ಮಹಮ್ಮದ ಅನ್ವರ ಹುಸೇನ ಮೊಗಲಾನಿ, ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು ಹಾವೇರಿ ಆದ ನಾನು ಆರೋಪಿತರಾದ ನಿಮ್ಮ ಮೇಲೆ ದೋಷಾರೋಪಣೆ ಮಾಡುವುದೇನೆಂದರೆ,

ಹಾವೇರಿ ಮಹಿಳಾ ಪೊಲೀಸ ಠಾಣಾ ವ್ಯಾಪ್ತಿಯಲ್ಲಿ ದಿನಾಂಕಃ 22.05.2017 ರಂದು ಬೀಡಿ ಗ್ರಾಮದ ಶ್ರೀ ಜ್ಞಾನೇಶ್ವರ ಕಲ್ಯಾಣ ಮಂಟಪದಲ್ಲಿ 1 ನೇ ಆರೋಪಿಯಾದ ನೀನು ಚಾ.ಸಾ-1 ರವರನ್ನು ಶಾಸ್ರೋಕ್ತವಾಗಿ ಮದುವೆಯಾಗಿದ್ದು, ಮದುವೆ ಕಾಲಕ್ಕೆ ಚಾ.ಸಾ-1 ರವರ ಮನೆಯವರಿಂದ ವರದಕ್ಷಿಣೆಯಾಗಿ 2 ಲಕ್ಷ ರೂಪಾಯಿ ನಗದು ಹಣ ಹಾಗೂ 13 ತೊಲೆ ಬಂಗಾರದ ಒಡವೆಗಳನ್ನು ಹಾಗೂ ಬಾಂಡೆ ಸಾಮಾನು ಹಾಗೂ 1 ಜೊತೆ ಬಟ್ಟೆ, ಒಂದು ಕೈಗಡಿಯಾರ ಹಾಗೂ 1 ಕೆ.ಜಿ 250 ಗ್ರಾಂ ಬೆಳ್ಳಿ ಸಾಮಾನುಗಳನ್ನು ವರದಕ್ಷಿಣೆ ಪಡೆದುಕೊಂಡಿದ್ದು, ಮದುವೆಯಾದ ನಂತರ ಕೆಲವು ದಿನಗಳವರೆಗೆ ಚಾ.ಸಾ-1 ರವರನ್ನು ಚೆನ್ನಾಗಿ ನೊಂಡಿಕ್ಕೊಂಡು ನಂತರ 1 ನೇ ಆರೋಪಿಯಾದ ನೀನು 2 ನೇ ಆರೋಪಿಯೊಂದಿಗೆ ಸೇರಿಕೊಂಡು ನಿನ್ನಂತ ವರುಮನೆಯಿಂದ ಇನ್ನೂ ಇನ್ನೂ ಹೆಚ್ಚಿನ ದುಡ್ಡು ಬಂಗಾರವನ್ನು ತರುವಂತೆ ನಿರಂತರವಾಗಿ ದೈಹಿಕ, ಮಾನಸಿಕ ಕಿರುಕುಳ ನೀಡುತ್ತಾ ಬಂದಿದ್ದು, ಕಾರಣ ಭಾರತೀಯ ದಂಡ ಸಂಹಿತೆ ಕಲಂ**.498(ಎ)** ಸಹಕಲಂ **34** ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುತ್ತೀರಿ?

ಎರಡನೇಯದಾಗಿ ಆರೋಪಿತರಾದ ನೀವು ಸಮಾನ ಉದ್ದೇಶದಿಂದ **1** ನೇ ಆರೋಪಿಯಾದ ನೀನು ಚಾ.ಸಾ**-1** ಇವರಿಗೆ ಕೈಯಿಂದ**,** ಕೆನ್ನೆಗೆ ಹೊಡೆದು**,** ದೂಡಿ**,** ಕಾಲಿನಿಂದ ಒದ್ದಿದ್ದು**,** ಕಾರಣ ಭಾರತೀಯ ದಂಡ ಸಂಹಿತೆ ಕಲಂ**.323** ಸಹಕಲಂ **34** ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುತ್ತೀರಿ?

ಮೂರನೇಯದಾಗಿ 1 ನೇ ಆರೋಪಿಯಾದ ನೀನು ಚಾ.ಸಾ-1 ಇವರಿಗೆ ನಿನ್ನನ್ನು ಜೀವ ಸಹಿತ ಬಿಡುವದಿಲ್ಲ ಎಂದು ಹೇಳಿದ್ದು, ಕಾರಣ ಭಾರತೀಯ ದಂಡ ಸಂಹಿತೆ ಕಲಂ**.506** ಸಹಕಲಂ **34** ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುತ್ತೀರಿ?

ನಾಲ್ಕನೇಯದಾಗಿ ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ ಆರೋಪಿತರಾದ ನೀವು ಚಾ.ಸಾ-1 ರವರಿಗೆ ಹೆಚ್ಚಿನ ವರದಕ್ಷಿಣೆಯಾಗಿ ಪಿರ್ಯಾದಿಯ ತವರುಮನೆಯಿಂದ ರೂ.20,00,000/- ತೆಗೆದುಕೊಂಡು ಬಾ ಎಂದು ಹೆಚ್ಚಿನ ವರದಕ್ಷಿಣೆಗೆ ಬೇಡಿಕೆ ಇಟ್ಟಿದ್ದು, ಕಾರಣ ವರದಕ್ಷಿಣೆ ನಿಷೇಧ ಕಾಯ್ದೆ ಕಲಂ**.3** ಮತ್ತು **4** ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುತ್ತೀರಿ?

ಮೇಲೆ ಹೇಳಿದ ದೋಷಾರೋಪಣೆ ಮೇಲೆ ನೀವು ಈ ನ್ಯಾಯಾಲಯದ ವಿಚಾರಣೆಗೆ ಗುರಿಯಾಗಿರುತ್ತೀರಿ ಎಂದು ನಿರ್ದೇಶಿಸಿದ್ದೇನೆ.

ಹಾವೇರಿ.
ದಿಃ 05.12.2025

(ಮಹಮ್ಮದ ಅನ್ವರ ಹುಸೇನ ಮೊಗಲಾನಿ)
ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,
ಹಾವೇರಿ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಹಾವೇರಿ.
ಸಿಸಿ ನಂಬರ್ **125/2019**
ದಿನಾಂಕಃ **05.12.2025.**

ಫಿರ್ಯಾದಿ ಸರಕಾರ **(**ಹಾವೇರಿ ಮಹಿಳಾ ಪೊಲೀಸ ಠಾಣೆ**).**

ವಿರುದ್ಧ

ಆರೋಪಿ **1.** ಈರಣ್ಣ ತಂದೆ ನಿಂಗಪ್ಪ ಬೆಳ್ಳಿವಾಲಿ

1. ಈ ಮೇಲೆ ಹೇಳಿದ ಆರೋಪಣೆ ನಿನಗೆ ಅರ್ಥವಾಗಿದೆಯೇ?

ಉತ್ತರಃ

2. ಈ ಮೇಲೆ ಹೇಳಿದ ಆರೋಪಣೆಯನ್ನು ಒಪ್ಪಿಕೊಳ್ಳುತ್ತಿಯೋ ಅಥವಾ ವಿಚಾರಣೆಯಾಗಬೇಕೆಂದು ಬಯಸುತ್ತಿಯೋ?

ಉತ್ತರಃ

*(ಈ ಮೇಲೆ ಹೇಳಿದ ಆರೋಪಣೆಯನ್ನು ಆರೋಪಿಗೆ ತಿಳಿದ ಭಾಷೆಯಲ್ಲಿ ಒದಿ ಹೇಳಿದ್ದು, ಆರೋಪಿ ಅರ್ಥ ಮಾಡಿಕೊಂಡು ಹೇಳಿದ ಹೇಳಿಕೆಯನ್ನು ಅದೇ ರೀತಿ ಬರೆದುಕೊಳ್ಳಲಾಯಿತು)*

(ಮಹಮ್ಮದ ಅನ್ವರ ಹುಸೇನ ಮೊಗಲಾನಿ)
ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,
ಹಾವೇರಿ.

ಆರೋಪಿಯ ಸಹಿಃ

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಹಾವೇರಿ.
ಸಿಸಿ ನಂಬರ್ **125/2019**
ದಿನಾಂಕಃ **05.12.2025.**

ಫಿರ್ಯಾದಿ ಸರಕಾರ **(**ಹಾವೇರಿ ಮಹಿಳಾ ಪೊಲೀಸ ಠಾಣೆ**).**

ವಿರುದ್ಧ

ಆರೋಪಿ **2.** ನಾಗಮ್ಮ ಉರ್ಫ ಪ್ರೇಮಾ ಕೋಂ ನಾಗಪ್ಪ ಬೆಳ್ಳಿವಾಲಿ

1. ಈ ಮೇಲೆ ಹೇಳಿದ ಆರೋಪಣೆ ನಿನಗೆ ಅರ್ಥವಾಗಿದೆಯೇ?

ಉತ್ತರಃ

2. ಈ ಮೇಲೆ ಹೇಳಿದ ಆರೋಪಣೆಯನ್ನು ಒಪ್ಪಿಕೊಳ್ಳುತ್ತಿಯೋ ಅಥವಾ ವಿಚಾರಣೆಯಾಗಬೇಕೆಂದು ಬಯಸುತ್ತಿಯೋ?

ಉತ್ತರಃ

*(ಈ ಮೇಲೆ ಹೇಳಿದ ಆರೋಪಣೆಯನ್ನು ಆರೋಪಿಗೆ ತಿಳಿದ ಭಾಷೆಯಲ್ಲಿ ಒದಿ ಹೇಳಿದ್ದು, ಆರೋಪಿ ಅರ್ಥ ಮಾಡಿಕೊಂಡು ಹೇಳಿದ ಹೇಳಿಕೆಯನ್ನು ಅದೇ ರೀತಿ ಬರೆದುಕೊಳ್ಳಲಾಯಿತು)*

(ಮಹಮ್ಮದ ಅನ್ವರ ಹುಸೇನ ಮೊಗಲಾನಿ)
ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,
ಹಾವೇರಿ.

ಆರೋಪಿಯ ಸಹಿಃ